

ಕರೆಯುವುದಿಲ್ಲ. ಒಂದು ಹೊತ್ತು ಹೊಟ್ಟೆತುಂಬ ಊಟಕ್ಕೂ ಇಲ್ಲದ ಸ್ಥಿತಿ. ಮಕ್ಕಳಿಗೆ ಶಿಕ್ಷಣ ಕೊಡಿಸುವುದಂತೂ ದೂರದ ಮಾತು.

ಈಗ ಕರ್ನಾಟಕದಲ್ಲಿ ಒಣ ಪಾಯಿಖಾನೆಗಳಿಲ್ಲ (ಡ್ರೈ ಲ್ಯಾಟ್ರಿನ್) ಎಂದು ಹೇಳಲಾಗುತ್ತಿದೆ. ಆದರೆ ಮೊದಲೆಲ್ಲ ಒಣ ಪಾಯಿಖಾನೆಗಳಿಂದ ಗುಂಡಿಗಳಿಂದ ಬಕೀಟು ಅಥವಾ ಬುಟ್ಟಿಯಲ್ಲಿ ಮಲವನ್ನು ಎತ್ತಿ, ತುಂಬಿಕೊಂಡು ಊರಾಚೆಗೆ ತೆಗೆದುಕೊಂಡು ಹೋಗಿ ಹೊತ್ತು ಹಾಕುತ್ತ ಮಧ್ಯವಯಸ್ಸಿಗೇ ಮುಪ್ಪಾದವರು ಕೆಜಿಎಫ್, ಕೋಲಾರ, ಮುಳಬಾಗಿಲು, ಮಾತ್ರವಲ್ಲ ಇಡೀ ಕರ್ನಾಟಕದಲ್ಲಿ ಸಿಗುತ್ತಾರೆ.

“ಹದಿಮೂರು ಹದಿನಾಲ್ಕು ವರ್ಷಕ್ಕೆಲ್ಲ ನಮ್ಮ ತಂದೆಯ ಜೊತೆಗೆ ಕೆಲಸ ಶುರು ಮಾಡಿದೆ. ನಮ್ಮದೇ ಬಕೀಟು, ಸನಿಕೆ, ಗಡಪಾರು, ಹಗ್ಗ ಎಲ್ಲ ತಗಂಡು ಹೋಗದು. ಅವ್ರು ಏನೂ ಕೊಡ್ತಿರಲಿಲ್ಲ. ಕೆಲವು ಮನೇಲಿ ಹಿಂದುಗಡೆ ಒಂದು ಗುಂಡಿ, ಮೇಲೆ ಹಂಗೇ ಕಲ್ಲು ಮುಚ್ಚಿರ್ತಿದ್ದರು. ಅದ್ರಲ್ಲಿ ಅವ್ರು ಕಕ್ಕಸು ಮಾಡದು, ನಾವು ಮೂರು ನಾಲ್ಕು ದಿನಕ್ಕೊಮ್ಮೆ ಹೋಗಿ ತುಂಬಿಕೊಂಡು ಚೆಲ್ಲದು. ಜಾಸ್ತಿ ಜನರಿದ್ದ ಮನೆಗೆ ದಿನಾಲೂ ಹೋಗಬೇಕಿತ್ತು. ನಮ್ಮನ್ನು ಮುಟ್ಟದು ಬಿಡಿ, ಬಾಯಾರಿಕೆ ಆದರೆ ಕುಡಿಯಕ್ಕೆ ನೀರು ಕೂಡ ಕೊಡ್ತಿರಲಿಲ್ಲ. ತಗಂಡು ಹೋಗುವಾಗ ಹಿಂಗೆ ಅಲ್ಲಿ ಇಲ್ಲಿ ಚೆಲ್ಲೋದು, ನಮ್ಮ ಮೈಮೇಲೆ ಚೆಲ್ಲೋದು. ಹೊಲಸು ವಾಸನೆ. ಏನು ಮಾಡದು. ನಮಗೆ ಹೊಟ್ಟೆಗೆ ಇಲ್ಲ ಆಗ. ಐವತ್ತು ಅರವತ್ತು ರೂಪಾಯಿ ಕೊಟ್ಟರೆ ಅದೇ ಹೆಚ್ಚು. ಅದನ್ನು ನೆನಸಬಾರದು ಈಗ” ಎಂದು ಮುಳಬಾಗಿಲಿನ ವೆಂಕಟರಮಣಪ್ಪ ಹೇಳುತ್ತಾರೆ.

## ಮಹಿಳೆಯರ ನೋವಿಗಿಲ್ಲ ಕೊನೆ

“ಉತ್ತರ ಪ್ರದೇಶ, ಬಿಹಾರ, ರಾಜಾಸ್ತಾನ್ ಜಮ್ಮು ಮತ್ತು ಕಾಶ್ಮೀರ, ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತ್, ಉತ್ತರಾಖಂಡಗಳಲ್ಲಿ ಬೇರೆ ರಾಜ್ಯಗಳಿಂತ ಹೆಚ್ಚು ಒಣ ಪಾಯಿಖಾನೆಗಳು ಈಗಲೂ ಇವೆ. ಇವು ಮನೆಯ ಒಳಗೇ ಇರುತ್ತವೆ. ಪ್ರತೀ ದಿನ ದಲಿತ ಮಹಿಳೆಯರು ಬಂದು ಮಲವನ್ನು ಗುಂಡಿಯಿಂದ ಬಳಿದು ಬುಟ್ಟಿಯಲ್ಲಿ ತೆಗೆದುಕೊಂಡು ಹೋಗಿ, ಹಳ್ಳಿಯ ಹೊರಗೆ ಹಾಕುತ್ತಾರೆ. ಇವರಿಗೆ ಕೆಲವು ಕಡೆ ದಿನಕ್ಕೆ 20–30 ರೂಪಾಯಿ ಕೊಡ್ತಾರೆ. ಕೆಲವು ಕಡೆ ಅದೂ ಇಲ್ಲ, ವರ್ಷಕ್ಕೆರಡು ಸಲ ಸ್ವಲ್ಪ ಧಾನ್ಯ ಕೊಡ್ತಾರೆ. ಒಂದು ದಿನ ಕೆಲಸಕ್ಕೆ ಹೋಗದಿದ್ದರೆ ನಿಂದನೆ, ಅವಹೇಳನ. ಯಾರಿಗೂ ಅವರ ಹೆಸರು ಕೂಡ ಗೊತ್ತಿರುವುದಿಲ್ಲ – ಭಂಗಿ, ತೋಟಿ ಇದೇ ಹೆಸರು. ಸುಮಾರು 2 ಲಕ್ಷಕ್ಕೂ ಹೆಚ್ಚು ದಲಿತ ಮಹಿಳೆಯರು ಈ ಕೆಲಸ ಮಾಡುತ್ತಾರೆ” ಎನ್ನುತ್ತಾರೆ ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಬೇಜವಾಡ ವಿಲ್ಸನ್.

ವಿಷಾನಿಲ ಉಸಿರಾಡುವುದರಿಂದ ಮತ್ತು ಅಸಹಜ ಭಂಗಿಯಲ್ಲಿ ನಿಂತು ಕೆಲಸ ಮಾಡುವುದರಿಂದ, ಇವರಿಗೆ ಚರ್ಮರೋಗ,

